# ಬೈಕ್‌ಮೋಹಿ ಜೋರ್ಡಾನ್‌ನ ಆಮರ್ ಯಾಹಿ




ಜೋರ್ಡಾನ್‌ನಿಂದ ಮೈಸೂರಿಗೆ ಬಂದ ಆಮರ್ ಯಾಹಿ

ಮೊಬೈಲ್, ಸ್ಮಾರ್ಟ್‌ಫೋನ್ ಪ್ರತಿಯೊಬ್ಬ ವ್ಯಕ್ತಿಯ ಬಿಟ್ಟಿರಲಾರದ ಸಂಗಾತಿ. ಬೈಕ್, ಸ್ಕೂಟರಿಗೂ ಇದು ಅನ್ವಯ. ದೇಶದಲ್ಲಿ ಕಡುಬಡವನ ಮನೆಯಲ್ಲೂ ಬೈಕ್ ಸರ್ವೇಸಾಮಾನ್ಯ. ಸೈಕಲ್‌ನಷ್ಟೇ ಬೈಕ್ ಕಲಿಕೆ ಸುಲಭ ಹಾಗೂ ಸರಾಗ. ಇದಕ್ಕಾಗಿ ಪ್ರತ್ಯೇಕ ತರಬೇತಿ ಅಗತ್ಯವಿಲ್ಲ. ಆದರೆ, ಬೈಕ್‌ಗಳ ಕಡುಮೋಹಿ ವಿದೇಶಿ ಪ್ರಜೆ, ಶೈಕ್ಷಣಿಕ ಉದ್ದೇಶಕ್ಕೆ ಭಾರತಕ್ಕೆ ಬಂದು ಬೈಕ್ ಓಡಿಸುವುದನ್ನು ಕಲಿತಿದ್ದಾರೆ!

ಪಿಎಚ್.ಡಿ ಪದವಿಗಿಂತ ಅವರಿಗೆ ಬೈಕ್ ಕಲಿಕೆಯೇ ಹೆಚ್ಚು ಎನ್ನುವಂತಿತ್ತು ಅವರ ಮುಖಭಾವ. ಬೈಕ್‌ನಲ್ಲಿ ದೂರದ ಪ್ರಯಾಣ ಅವರಿಗೆ ಹೆಚ್ಚು ಇಷ್ಟ. ಅವರ ದೇಶಕ್ಕೆ ಹೋದ ಬಳಿಕ ಮಾಡುವ ಮೊದಲ ಕೆಲಸವೇ ಬೈಕ್ ಖರೀದಿಯಂತೆ.

ಜೋರ್ಡಾನ್ ದೇಶದ ರಾಜಧಾನಿ ಅಮ್ಮಾನ್ ನಗರದ ನಿವಾಸಿ ಆಮರ್ ಯಾಸಿನ್ ಖಾಲಿಹ್ ಈ ಬೈಕ್‌ಪ್ರೇಮಿ. ಮೈಸೂರು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಪಿಎಚ್.ಡಿ ಅಧ್ಯಯನ ಮಾಡುತ್ತಿದ್ದಾರೆ. ಮೈಸೂರಿನ ಗೋಕುಲಂನಲ್ಲಿ ವಾಸ. ಸುತ್ತಾಡುವುದಕ್ಕೆ 350 ಸಿ.ಸಿ ಸಾಮರ್ಥ್ಯದ ಕೆಟಿಎಂ ಬೈಕ್ (ಸೆಕೆಂಡ್ ಹ್ಯಾಂಡಲ್) ಜೊತೆಗಿದೆ. ಅದರಲ್ಲೇ ಬಹುಪಾಲು ಪ್ರಯಾಣ ಮಾಡುತ್ತಾರೆ. ಬೆಂಗಳೂರು, ಊಟಿ, ವಯನಾಡು, ಚಾಮುಂಡಿ ಬೆಟ್ಟ, ಕೃಷ್ಣರಾಜ ಸಾಗರ... ಹೀಗೆ ಅನೇಕ ಸ್ಥಳಗಳಿಗೆ ಭೇಟಿ ನೀಡಿದ್ದಾರೆ.

'ನಾನು ಹೆಚ್ಚು ಇಷ್ಟಪಡುವ ವಸ್ತುಗಳಲ್ಲಿ ಬೈಕ್‌ಗೆ ಮೊದಲ ಪ್ರಾಧಾನ್ಯತೆ. ಬೈಕ್ ನನ್ನ ರಕ್ತದಲ್ಲಿ ಅಡಗಿದೆ' ಎನ್ನುವ ಆಮರ್, 'ಭಾರತಕ್ಕೆ ಬಂದ ಬಳಿಕವೇ ನನಗೆ ಬೈಕ್ ಮೇಲೆ ಮೋಹ ಬಂತು' ಎನ್ನುತ್ತಾರೆ.

ಅಚ್ಚರಿ ಸಂಗತಿ ಏನೆಂದರೆ, ಎರಡು ವರ್ಷಗಳಿಗಿಂತ ಹಿಂದಿನವರೆಗೂ ಜೋರ್ಡಾನ್‌ನಲ್ಲಿ ಬೈಕ್ ಮಾರಾಟ ಹಾಗೂ ಚಾಲನೆ ನಿಷಿದ್ಧವಾಗಿತ್ತಂತೆ. ವಾಹನ ದಟ್ಟಣೆಗೆ ಬೈಕ್‌ಗಳೇ ಕಾರಣ ಎಂಬುದು ಇದರ ಹಿಂದಿನ ಉದ್ದೇಶ. ಅಮ್ಮಾನ್‌ನಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ಪಿಎಚ್.ಡಿಗಾಗಿ 2015ರಲ್ಲಿ ಮೈಸೂರಿಗೆ ಬಂದಿದ್ದಾರೆ.

'ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾಲಯದ ಬಗ್ಗೆ ಒಳ್ಳೆಯ ಹೆಸರಿದೆ. ಹಳೆಯ ವಿಶ್ವವಿದ್ಯಾಲಯ ಬೇರೆ. ಗುಣಮಟ್ಟದ ಶಿಕ್ಷಣವೂ ಸಿಗುತ್ತಿದೆ' ಎಂಬುದು ಅವರ ಅನಿಸಿಕೆ.

'ಭಾರತ ಹಾಗೂ ಜೋರ್ಡಾನ್ ಸಂಸ್ಕೃತಿಗೂ ಸಾಮ್ಯತೆ ಇದೆ' ಎನ್ನುವ ಆಮರ್, 'ಜನರ ಭಾವನೆಗಳೂ ಒಂದೇ ರೀತಿ ಇವೆ. ಅದರಲ್ಲೂ ಕರ್ನಾಟಕ ಭಿನ್ನವಾಗಿ ಗುರುತಿಸಿಕೊಳ್ಳುತ್ತದೆ. ಇಲ್ಲಿ ಆಂಧ್ರ, ತಮಿಳುನಾಡು, ಕೇರಳ, ಬಿಹಾರ ಹೀಗೇ ಅನೇಕ ರಾಜ್ಯಗಳ ಜನರು ವಾಸವಾಗಿದ್ದಾರೆ. ಕರ್ನಾಟಕ ಮಿಕ್ಸ್ ರಾಜ್ಯ' ಎನ್ನುತ್ತಾರೆ.

ಜೋರ್ಡಾನ್‌ನಲ್ಲಿ ಶೇ 85ರಷ್ಟು ಮುಸ್ಲಿಮರು, ಶೇ 15ರಷ್ಟು ಕ್ರಿಶ್ಚಿಯನ್ ಸಮುದಾಯದವರು ಇದ್ದಾರಂತೆ. ಮಳೆ ಬೀಳುವುದು ಕಡಿಮೆಯಾದ್ದರಿಂದ ನೀರಿನ ಕೊರತೆಯೂ ಕಾಡುತ್ತಿದೆ. ಚಳಿಗಾಲದಲ್ಲಿ ವಿಪರೀತ ಚಳಿ, ಬೇಸಿಗೆಯಲ್ಲಿ ವಿಪರೀತ ಬಿಸಿ ಇರುತ್ತದೆ. ಕೃಷಿ ಚಟುವಟಿಕೆ ಕಡಿಮೆಯಂತೆ.

ಆಮರ್ ಹೇಳಿದ ಮತ್ತೊಂದು ವಿಶೇಷ ಸಂಗತಿ, 'ಭಾರತದಲ್ಲಿ ಇರುವಂತೆ ವರದಕ್ಷಿಣೆ ಸಂಪ್ರದಾಯ ನಮ್ಮಲ್ಲಿಲ್ಲ. ವಧುದಕ್ಷಿಣೆ ಪದ್ಧತಿ ಇದೆ. ವರನ ಕಡೆಯವರು ವಧುವಿಗೆ ದಕ್ಷಿಣೆ ನೀಡಬೇಕು. ಚಿನ್ನ, ಬಟ್ಟೆಯಿಂದ ಹಿಡಿದು ಎಲ್ಲವನ್ನೂ ತಂದುಕೊಡಬೇಕು. ಅಲ್ಲದೆ, ಆಕೆಯ ಮನೆಯವರಿಗೂ ಬಟ್ಟೆಗಳು ಇತ್ಯಾದಿಯನ್ನು ನೀಡಬೇಕು. ಮದುವೆಗೆ ಕನಿಷ್ಠ ₹20ರಿಂದ 30 ಲಕ್ಷ ಖರ್ಚಾಗುತ್ತದೆ. ಇದನ್ನು 'ಮಹರ್' ಎಂದು ಕರೆಯುತ್ತಾರೆ. ಈ ಸಂಪ್ರದಾಯವು ದುಬಾರಿ ವೆಚ್ಚವನ್ನು ಬೇಡುತ್ತದೆ' ಎನ್ನುತ್ತಾರೆ.

'ಸರಿ, ಕಡುಬಡವರಾದರೆ ಏನು ಮಾಡುವುದು' ಎಂದು ಪ್ರಶ್ನಿಸಿದರೆ, 'ಸರ್ಕಾರವು ಮದುವೆಗೆ ಬಡ್ಡಿರಹಿತವಾಗಿ ಸಾಲ ಕೊಡುತ್ತದೆ. ಸಾಲ ಮರುಪಾವತಿಗೆ ಸುಮಾರು ₹ 20 ವರ್ಷಗಳವರೆಗೆ ಅವಕಾಶ ನೀಡಲಾಗುತ್ತದೆ. ಇಲ್ಲಿ ಕೃಷಿ ಸಾಲ ಪಡೆದಂತೆ. ಆ ಸಾಲ ಪಡೆದು ಮದುವೆ ಮಾಡಬೇಕಷ್ಟೆ' ಎಂದು ಹೇಳುತ್ತಾರೆ.

ಜೋರ್ಡಾನ್‌ನಲ್ಲಿ ಸಂಬಳ ಕಡಿಮೆ, ಜೀವನ ನಿರ್ವಹಣಾ ವೆಚ್ಚ ಹೆಚ್ಚಂತೆ. ಬ್ರೆಡ್ ಜೊತೆಗೆ ಕರ್‍ರಿ ಮಿಶ್ರಣ ಹೊಂದಿರುವ ತಿಂಡಿಗೆ ₹200 ಕೊಡಬೇಕಂತೆ. ಕಾಫಿ, ಟೀ ಬೆಲೆ ₹100! ಒಂದು ಕುಟುಂಬವು ಮನೆಯಲ್ಲೇ ಊಟವನ್ನು ತಯಾರಿ ಮಾಡಬೇಕಾದರೆ ಕನಿಷ್ಠ ₹1,000 ದಿಂದ ₹1,500 ಖರ್ಚು ಮಾಡಬೇಕು. ಹೋಟೆಲ್‌ನಲ್ಲಾದರೆ ₹4 ಸಾವಿರದಿಂದ ₹5 ಸಾವಿರ ಖರ್ಚು! ಇಲ್ಲಿ ಕಾಫಿ, ಟೀಗೆ ಹಾಲು ಮಿಶ್ರಣ ಮಾಡುವುದಿಲ್ಲ. ಹಾಲು ಲಭ್ಯವಿದ್ದರೂ ಅದನ್ನು ಹೆಚ್ಚಾಗಿ ಸಿಹಿ ಪದಾರ್ಥಗಳಿಗೆ ಬಳಕೆ ಮಾಡುತ್ತಾರಂತೆ.

'ನಮ್ಮಲ್ಲಿ ಹೆಚ್ಚಾಗಿ ಮಾಂಸಾಹಾರ ಸೇವನೆ ಮಾಡಿದರೂ ಅದಕ್ಕೆ ಮಸಾಲೆ ಪದಾರ್ಥಗಳನ್ನು ಹಾಕುವುದಿಲ್ಲ. ಆದರೆ, ಕರ್ನಾಟಕದಲ್ಲಿ ಸ್ಪೈಸಿ ಜಾಸ್ತಿ' ಎನ್ನುತ್ತಾರೆ ಆಮರ್.

ಬೆಲೆ ಸಮರ ತಿಂಡಿಗಷ್ಟೇ ಅಲ್ಲ, ಬೈಕ್ ಕಾರುಗಳಿಗೂ ಅನ್ವಯವಂತೆ. 350 ಸಿ.ಸಿ ಕೆಟಿಎಂ ಬೈಕ್ ಇಲ್ಲಿ ₹3 ಲಕ್ಷ ಇದ್ದರೆ ಅಲ್ಲಿ ₹7 ಲಕ್ಷ, ಹ್ಯೂಂಡೈ ವರ್ನಾ ಕಾರಿನ ಆರಂಭಿಕ ಬೆಲೆಯೇ ₹15 ಲಕ್ಷವಂತೆ!

ಐದಾರು ಕನ್ನಡ ಪದಗಳನ್ನೂ ಕಲಿತಿರುವ ಆಮರ್ ಅವರಿಗೆ ಭಾರತ ಸುರಕ್ಷಿತ ದೇಶವಾದರೆ, ಕರ್ನಾಟಕ ಮತ್ತಷ್ಟು ಸುರಕ್ಷಿತ ರಾಜ್ಯ ಎನಿಸಿದೆ. ಅಲ್ಲದೆ, ಜೋರ್ಡಾನ್‌ನ ಬಹುತೇಕರ ಅನಿಸಿಕೆಯೂ ಅದೇ ಆಗಿದೆಯಂತೆ.

■ ಎನ್.ನವೀನ್ ಕುಮಾರ್